ಯಕ್ಷಗಾನ

ಇಂದ್ರಜಿತುಕಾಳಗ

★

ಉಡುಪಿ

ಪಾವಂಜೆ ಗುರುರಾವ್ ಅಂಡ್ ಸನ್ಸ್

Scanned by CamScanner

ಯಕ್ಷಗಾನ ಇಂದ್ರಜಿತುಕಾಳಗ

ಉಡುಪಿ

ಪಾವಂಜೆ ಗುರುರಾವ್ ಅಂಡ್ ಸನ್ಸ್

Scanned by CamScanner

Yakṣagāna Indrajitukālaga

ಏಳನೆಯ ಅಚ್ಚು:

ಶಾ. ಶಕ ೧೮೯೬

ಪ್ರಕಾಶಕರು:

ಪಾವಂಜೆ ಗುರುರಾವ್ ಅಂಡ್ ಸನ್ಸ್

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಉಡುಪಿ

ಅಚ್ಚುಗಾರರು:

ಪಾವಂಜೆ ಗುರುರಾವ್ ಅಂಡ್ ಸನ್ಸ್

ಶ್ರೀಕೃಷ್ಣಮುದ್ರಣಾಲಯ

ಉಡುಪಿ

ಎಲ್ಲ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.

ರೂ. 0.40

Scanned by CamScanner

ಶ್ರೀಃ

॥ ಶ್ರೀರಾಮಚಂದ್ರಪರಬ್ರಹ್ಮಣೇ ನಮಃ ॥

ಶ್ರೀಮದ್ರಾಮಾಯಣದೊಳಗಣ

ಯಕ್ಷಗಾನ ಇಂದ್ರಜಿತುಕಾಳಗ

ಶಾರ್ದೂಲವಿಕ್ರೀಡಿತಂ

ಶ್ರೀರಾಮಂ ನವರತ್ನಕುಂಡಲಧರಂ ಶ್ರೀರಾಮರಕ್ಷಾಮಣಿಂ
ಶ್ರೀರಾಮಂ ಚ ಸಹಸ್ರಭಾನುಸದೃಶಂ ಶ್ರೀರಾಮಚಂದ್ರೋದಯಮ್ ।
ಶ್ರೀರಾಮಂ ಶ್ರುತಕೀರ್ತಿಮಾಕರಮಹಂ ಶ್ರೀರಾಮಮುಕ್ತಿಪ್ರದಂ
ಶ್ರೀರಾಮಂ ರಘುನಂದನಂ ಭಯಹರಂ ಶ್ರೀರಾಮಚಂದ್ರಂ ಭಜೇ ॥

ಭಾಮಿನಿ

ಕುಂಶನೆ ಕೇಳ್ಳೈ ರಾವಣೇಶ್ವರ । ನೆಸೆವ ಪುತ್ರಾಪೌತ್ರಬಾಂಧವ । ವಿಸರ ವಳಿಸಿದೆ ತಾನೆನುತ ಚಿಂತಿಸುವ ಸಮಯದಲಿ ॥ ಬಸವಳಿದು ಚಾರಕರು ಬಂದಾ । ದಶಮುಖಂಗರುಹಿದರು ರಾಮನ । ವಿಶಿಖದಲಿ ಮಕರಾಕ್ಷ ಹಾಯ್ದನು ಯಮನ ಪುರಕೆಂದು ॥ ೧ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಮಕರಾಕ್ಷ ಮಡಿದ ವಾರ್ತೆಯ ಕೇಳಿ । ದಶ । ಮುಖ ಧೈರ್ಯಗುಂದಿ ಕ್ಲೇಶವ ತಾಳಿ ॥ ಕಳವಳಿಸುತ ಮಂಚಕೊರಗಿದ । ದಿಟ್ಟ । ಕಲಹಗಾರಿಗನಂತೆ ಮರುಗಿದ ॥ ೧ ॥ ಜಲಜಭವಾಸ್ತ್ರ ಜಳ್ಳಾಯಿತೆ । ಜಯ । ಲಲನೆ ರಾಘವನಲ್ಲಿ ಹೋಯಿತೆ ॥ ಗೆಲಲೆಂದಟ್ಟಿದ ಧೈರ್ಯಪೂರ್ಣಗೆ । ನಮ್ಮ । ನೆಲನತೀರಿತಂ

ಕುಂಭಕರ್ಣಗೆ ॥ ೨ ॥ ತಂಗಿಯು ಕುಲಕೆ ಕೇಡಾದಳು । ಗೆಲು । ವಂಗವಿಲ್ಲ ಮಗೆ ರಾಘವನೊಳು ॥ ಸಾವು ನಿಶ್ಚಯುವೆಂದು ಬಗೆದನು । ಬಂದು । ದೇವೇಂದ್ರಜಿತು ಕಯ್ಯ ಮುಗಿದನು ॥ ೩ ॥

ಭಾಮಿನಿ

ಚಿಂತೆಯೇಕೆಲೆ ಜೀಯ ರಿಪುಕುಲ । ದಂತಕನು ತಾನಿರಲು ನಿಮ್ಮ ಮು ಖಾಂತರದಲಹುದೆನಿಸಿಕೊಂಬೆನು ಕಡೆಯ ಮಾತೇನು ॥ ಕಂತುಹರ ಕಮ ಲಜರೆನಗೆ ಮಾ । ರಾಂತರಿದಕೋ ಬಾಣವರಿನೃಪ । ರಂತರವಿದೇನೆನುತ ಗರ್ಜಿಸಿ ನುಡಿದನಿಂದ್ರಾರಿ ॥ ೧ ॥

ರಾಗ ಶಂಕರಾಭರಣ ಏಕತಾಳ

ತಂದೆ ಕೇಳ್ ಮರ್ಕಟರುಗಳ । ನಿಂದು ರಣದಿ ಗೆಲದೆ ಪಿಂತೆ । ಬಂದೆ ನಾದರೆಯು ನಿನ್ನ । ಕಂದನಲ್ಲೆಂದ ॥ ೧ ॥ ಶತ್ರುಗಳೆಲ್ಲವರನ್ನು । ಮರ್ದಿಸ ದಿರ್ದರೆ ನಾನು । ಸತ್ಯವೇ ಮಂಡೋದರಿಯ । ಪುತ್ರನಲ್ಲೆಂದು ॥ ೨ ॥ ತಾತ ನೊಳಪ್ಪಣೆ ಗೊಂಡು । ತಾನು ರಥವನೇರುತಾಸಂ । ಖ್ಯಾತ ಸೇನೆ ಕೂಡಿ ಕೊಂಡು । ನಡೆದನಿಂದ್ರಾರಿ ॥ ೩ ॥ ಸಂದಣಿಸುವ ಕೀಶಬಲವ । ನಂದು ಮಹಾಯುಧದಿ ಖಳನು । ಕೊಂದುವಟ್ಟಿದನು ಮಾಯಂ । ದಿಂದ ನಿಮಿಷದಿ ॥ ॥ ೪ ॥ ಬಿದ್ದ ಸೇನೆ ಕಂಡು ರಾಮು । ನೆದ್ದು ಬಿಲ್ಲ ಹಿಡಿದು ಖೂಳ । ನಿದ್ದ ಬಳಿಗೆ ಬಂದು ಶರದೊ । ಳದ್ದಿದನವನ ॥ ೫ ॥ ಧಾರಿಣಿಗಿಳಿದು ಬಂದು । ಹೋರುತಿರಲು ರಾಮು ರಥವ । ನೂರವೊಂದು ಮುರಿಯೆ ಖಳನು । ಸಾರಿದ ನಂದು ॥ ೬ ॥

ಭಾಮಿನಿ

ಇವನೊಡನೆ ಕಾದುವ ಸಮರ್ಥರು । ಭುವನ ಮೂರರೊಳಿಲ್ಲೆನುತ ಖಳ । ಪವನಜನ ಸಮ್ಮುಖಕೆ ಹಾಯ್ದನು ಕಪಟವನು ನೆನೆದು ॥ ಶಿವನಿಗರಿಯದ ಧೂರ್ತ ಮಾಯದೊ । ಳವನಿಜೆಯ ನಿರ್ಮಿಸುತ ಕಪಿಗಳ । ನಿವಹದಲಿ ತೋರಿದನು ಖಡ್ಗವ ಕೊರಳಿಗಾನಿಸುತ ॥ ೧ ॥

ರಾಗ ನೀಲಾಂಬರಿ ಏಕತಾಳ

ನೋಡಿದೇನಯ್ಯೊ ಹನುಮ । ರಕ್ಕಸನೆನಗೆ । ಮಾಡುವದಾಜ್ಞೆಯನು ॥ ॥ ೧ ॥ ಗಾಢದಿಂದೆನ್ನ ರಕ್ಷಿಸೊ । ರಾಘವನೊಳು । ಕೂಡಿರ್ಪೆ ಬದುಕಿದರೆ ॥ ॥ ೨ ॥ ಒತ್ತಿ ಗಂಟಲು ಹಿಡಿದು । ಕಬರಿ ಕಯ್ಯ । ಸುತ್ತಿ ನೆಗಹಿದ ಖಳನು ॥

Scanned by CamScanner

॥ ೩ ॥ ಕೆಟ್ಟೆನಯ್ಯಯ್ಯೊ ಹನುಮ । ರಾಘವನಿಗೆ । ಪಟ್ಟದರಸಿಯುಲ್ಲವೆ ॥
॥ ೪ ॥ ಯಾರಿಗಾಗಿ ಕಾದುವಿರಿ । ಎನ್ನನು ಕೊಂದು । ವಾರಿಧಿಗೇಕೆ ಸೇತು ॥
॥ ೫ ॥ ಉಬ್ಬಸ ಘನವಾಯಿತೆ । ಕಾಯ್ವರೆನ । ಗೊಬ್ಬರಿಲ್ಲದೆ ಹೋಯಿತೆ ॥
॥ ೬ ॥ ಘನ ಬೇಗ ಹನುಮ ಪೋಗು । ರಾಘವನೆಡೆ । ಗನುಮಾನ ಮಾಡದಿರು ॥ ೭ ॥ ವನಿತೆಯಾಸೆಯಿಲ್ಲದಡೆ । ಲಕ್ಷ್ಮಣಾಂಗದ । ಗಿನಜಗಾದರು ನೀಪೇಳು ॥ ೮ ॥ ಗಂಡ ಬೇಡೆಂದು ಲಂಕೆಗೆ । ಬಂದವಳಲ್ಲ । ಖಂಡಪರಶು ತಾಬಲ್ಲ ॥ ೯ ॥ ಮರುಗಿ ಮನದಿ ಹನುಮ । ರಕ್ಕಸನಿಗಿಂ । ತರುಹಿದ ದೈನ್ಯದಲಿ ॥ ೧೦ ॥

ರಾಗ ಸಾರಂಗ ಅಷ್ಟತಾಳ

ಮತಿವಂತ ಖಳನೆ ಕೇಳು । ಹೆಂಗೊಲೆಯಿಂದು । ಹಿತವೇನೊ ತಿಳಿದು ಪೇಳು ॥ ಯತಿ ಪೌಲಸ್ತ್ಯನ ವೀರ್ಯ । ಗತಿಗೆ ಸಾಧನವಿಂದ್ರ । ಜಿತುವೆಂಬ ನಾಮದೊ । ಅತಿಶಯ ಬಿರುದುಳ್ಳ ॥ ಮತಿವಂತ ॥ ೧ ॥ ಓದಿ ನೋಡಿದೆ ಶಾಸ್ತ್ರವ । ಬೊಮ್ಮನ ಚತು । ರ್ವೇದ ಪುರಾಣಸ್ತೋತ್ರವ ॥ ಮೇದಿನಿಯೊಳು ವಿಕ್ರ । ಮಾಗ್ರಣಿಯೆನಿಸಿದೆ । ಸಾಧಿಸಿ ಬೊಮ್ಮನ । ಶಿವನನೊಲಿಸಿಕೊಂಡೆ ॥ ಮತಿವಂತ ॥ ೨ ॥ ಅರಸುತನದಲಿ ನೀನು । ಆಳುವ ಲಂಕಾ । ಪುರದರಸನ ಮಗನು ॥ ಹರಕಮಲಜರಿತ್ತ । ವರವುಂಟೆನುತಲೀಕೆ । ಹರಣಗೊಂಡರೆ ಮುಂದೆ । ಪರಿಹಾರ ನಿನಗುಂಟೆ ॥ ಮತಿವಂತ ॥ ೩ ॥

ಭಾಮಿನಿ

ಬರಲಿದರ ದೆಸೆಯಿಂದಪಪ್ರಥೆ । ದೊರಕಲಿದರಿಂದಪಜಯವು ಮುಂ । ಬರಿದಿರಲಿ ದುಷ್ಕೀರ್ತಿಯಂಜುವ ಭಟನು ತಾನಲ್ಲ ॥ ಮರುತಸುತ ಕೇಳಸುರರಾವಾ । ಸುರವಿಕರ್ಮ ವಿಧರ್ಮ ಪಥವೆಮು । ಗರಿದೆನುತ ಜಾನಕಿಯ ಕಡಿದಿಳುಹಿದನು ಧರಣಿಯಲಿ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಧರಣಿನಂದನೆಶಿರ ಧರೆಗೆ ಬೀಳದ ಮುನ್ನ । ವೆರಗಿದ ಖಳನ ಮುಷ್ಟಿಯಲಿ ॥ ಭರಕೆ ತಪ್ಪಿಸಿಕೊಂಡು ಜುಣುಗಲು ರಥವು ಜ । ಜ್ಝರಿತವಾಗಲು ಮರಳಿದನು ॥ ೧ ॥ ಅಯ್ಯಯ್ಯೊ ಅವನಿಜೆಯಬಲೆಯರೊಳು ಸಹಜೆ । ಮೆಯ್ಯ ಚಾಚುವುದಾಯ್ತು ನೆಲಕೆ ॥ ಕಯ್ಯಾರೆ ಕರ್ಮವನುಣಿಸಿತೆನಗೆ ಜಗ । ದಯ್ಯನೊಳೇನೆಂಬೆನಕಟ ॥ ೨ ॥ ಪಾತಕಿ ನಾ ನಿಮ್ಮ ಸೇರಿರ್ಪೆನೆಂದರೆ । ಸೀತೆಯ

ಪಸರಡಗಿಸಿತೆ ॥ ಯಾತಕೋಸಂಗ ಬಂದೆ ಖಳನುಪದ್ರಕೆ ನಾನು । ಮಾತೆ ನಿಮ್ಮಳಿವ ನೋಡುವರೆ ॥ ೩ ॥ ಕಡಿವೆರಡರಲಿ ಶೋಣಿತಧಾರೆ ಸುರಿವುದ । ಬಿಡುವ ಮುಚ್ಚುವ ಕಣ್ಣಾಕೃತಿಯು ॥ ಕಡುಪ್ರಕಾಶದ ಚಂದ್ರಾನನ ಕಂಡು ಹನುಮಂತ । ಪೊಡವಿಗೊರಗಿದ ಮೂರ್ಛೆಯಲಿ ॥ ೪ ॥

ವಾರ್ಧಿಕ

ಅನಿಲಜನ ಘನಸಿಂಹನಾದಮಂ ಕಾಣದಿರೆ । ಧನುವ ಝೇಂಕರಿಸುತ್ತಲಿಂದ್ರಾರಿ ಮೆರೆವುತಿರೆ । ವನಜಾಕ್ಷ ಕಂಡು ಜಾಂಬವಗರುಹಿ ಸಂಗತಿಯು ತಿಳಿದು ಬಾ ಪೋಗೆಂದನು ॥ ಅನುವರದ ಭೂಮಿಯೊಳ್ ಬಿದ್ದ ಸೇನೆಯು ದಾಂಟಿ । ಘನತರಶೃಂಗಳಂ ಹತ್ತಿಳಿದು ಬಳಲುತ್ತ । ಜನಕಜೆಯು ಬಿದ್ದ ಚೋದ್ಯವ ಕಂಡು ವಿಧಿಸುತಂ ಹನುಮನೊಳ್ ಬೆಸಗೊಂಡನು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕೇಳು ಮರುತಾತ್ಮಜನೆ ಇಂದಿನ । ಕಾಳಗದಿ ಖಳ ಮೆರೆದ ಪರಿಯನು । ಕೇಳಿ ಬಾರೆಂದೆನ್ನ ಕಳುಹಿದ । ವ್ಯಾಳಶಯನ ॥ ೧ ॥ ಏನು ನಿನ್ನಯ ಮನದ ದುಗುಡವಿ । ದೇನೆನುತ ಬೆಸಗೊಂಡ ಬೊಮ್ಮನ । ಸೂನುವಿಂಗನಿಲಜನು ಪೇಳ್ದನಿ । ಧಾನದಿಂದ ॥ ೨ ॥

ರಾಗ ಕಾಂಭೋಜಿ ಅಷ್ಟತಾಳ

ಜಾಂಬವದೇವ ಕೇಳಯ್ಯ । ಕಾದಿ । ಜಂಭಾರಿಜಿತುವೆನ್ನ ಕಯ್ಯ ॥ ಅಂಬುಜಾಕ್ಷನ ಸಮರದಿ ಸೋತ ಖತಿಯಿಂದ । ಕುಂಭಿನಿಜಾತೆಯ ಕೆಡಹಿ ತಪ್ಪಿಸಿಕೊಂಡ ॥ ಜಾಂಬವ ॥ ೧ ॥ ಇವನ ಕೊಲ್ಲದಡೀಗ ನಾನು । ಬಾಳಿ । ಭುವನದೊಳಗೆ ಫಲವೇನು ॥ ದಿವಕರಕುಲಜರ್ಗೆ ಮೊಗವೆಂತು ತೋರುವೆ । ಶಿವನಾಣೆ ಸಾವುದಲ್ಲದೆ ಪರಿಹರವುಂಟೆ ॥ ಜಾಂಬವ ॥ ೨ ॥

ರಾಗ ಶಂಕರಾಭರಣ ತ್ರಿವುಡೆತಾಳ

ಜಗದ ಜೀವನ ಬೇಡ ನಿನಗೀ । ಬಗೆಯ ಪಂಥಾವೆನುತಲಿ ॥ ಪೊಗುವ ಕಂಬನಿ ತೊಡೆದು ನಯುನದಿ । ಜಾಂಬವಂತ ॥ ೧ ॥ ಮರುತಸುತ ಸುಜ್ಞಾನಿ ನಿನಗೀ । ಮರುಳು ಯಾಕೈ ಸುಮ್ಮನೆ ॥ ನಿರತವೋ ಪುಸಿಯೆಂದು ತಿಳಿಯದೆ । ಧೈರ್ಯ ಸಾಕೆ ॥ ೨ ॥ ಮಾಯೆಯಿಂದು ದಿವಿಜಾರಿ ರಚಿಸಿದ । ದೇವಿಯಲ್ಲಾ ತೆಗೆದುಕೊ ॥ ಆಯತಾಕ್ಷಿಯ ಮುಂದೆ ತೋರಿದ । ಡಾತ ಬಲ್ಲ ॥ ೩ ॥

Scanned by CamScanner

ತರಳೆಯನು ಕೊಂಡೊಯ್ದು ಪವನಜ । ಕಪಟ ಸತಿಯಾ ರಾವಣನ ॥ ಚರಣ ಕೊಪ್ಪಿಸಿ ಬಿನ್ನವಿಸಿದನು । ಖಳನ ಕಥೆಯು ॥ ೪ ॥

ಭಾಮಿನಿ

ಧರಣಿಜೆಯು ಖಂಡಿಸಿದ ಗಾಯದಿ । ಸುರಿವ ರಕುತವ ಕಂಡು ರಘುಪತಿ । ಯೊರೆಗಿರಲು ಮೂರ್ಛೆಯಲಿ ಸೌಮಿತ್ರ್ಯಾದಿ ಕಪಿಕಟಕ ॥ ಮರುಗುತಿರಲರೆ ಗಳಿಗೆ ಮಾತ್ರದೊ । ಳರಿಭಯಂಕರನೆದ್ದು ಸತಿಯಳ । ಕರದೊಳಗೆ ತಕ್ಕಮಿಸಿ ಹಲವಂಗದಲಿ ಹಲುಬಿದನು ॥ ೧ ॥

ರಾಗ ಸಾವೇರಿ ಆದಿತಾಳ

ಜನಕಾತ್ಮಜೆ ಜಾಣೆಯುರರಸಿಯೆ । ಮುನಿಸೆನ್ನೊಳು ಯಾತಕೆಂದೆನುತ ॥ ಘನಸ್ನೇಹದಿ ಚುಂಬಿಸುತಧರವ । ಮನದಣಿಯೆ ಮುದ್ದಾಡುತೆಂದ ॥ ೧ ॥ ಚಂದ್ರಾನನೆ ಚೆಲುವೆ ನೋಡೆಮ್ಮನು । ಮಂದಹಾಸದಿ ಮಾತನಾಡಬಲೆ ॥ ಇಂದ್ರಾಂತಕ ದಶಮುಖಾದಿಗಳನು । ಕೊಂದೀವೆ ಹಿಡಿ ನಂಬುಗೆಯನು ॥ ೨ ॥ ಬೇಡೆಂದರೆ ಸುಖಭಾಗ್ಯಹೀನನ । ಕೂಡೇತಕೆ ಬಂದೆ ಸಾವುದಕೆ ॥ ಮೂಢಾತ್ಮನ ಖಡುಗದ ಭಯದಿ ಕೂ । ಗಾಡಿದೆಯೆಷ್ಟೆಮ್ಮ ಕರೆಕರೆದು ॥ ೩ ॥ ದೇಶಾಂತರ ಇವಳಾಟಪಾಟದಿ । ದೇಶಾಯೋಧ್ಯಪುರವೆಂದೆನಿಸಿತು ॥ ಲೇಸಾಗಬೇಕೆಂದೆಮ್ಮ ಜಪಿಸುವ । ಈ ಸೀತೆಯು ಮರೆವರೆ ತಮ್ಮ ॥ ೪ ॥

ವಾರ್ಧಿಕ

ದೇವ ಕೇಳೆಂದಾ ವಿಭೀಷಣಂ ಕಯ್ ಮುಗಿದು । ದೇವಿ ಜಾನಕಿಯಲ್ಲ ನಮ್ಮವರ ಕಪಟವಿದು । ನೀವು ಚಿಂತಿಸಲೇಕೆ ನರರಂತೆ ಯೋಚಿಸಲು ನರ ಸತಿಯೆ ಜನಕಾತ್ಮಜೆ ॥ ಪಾವನಾತ್ಮಿಕೆ ವನದೊಳಿಲ್ಲದಡೆ ನಾ ನಿಮ್ಮ । ಸೇವೆ ಗಾಗುವನಲ್ಲವೆಂದಸುರಪತಿ ನುಡಿಯೆ । ಪಾವಮಾನಿಯುನಪ್ಪಣೆಯನಿತ್ತು ಕಳುಹಿದಂ ತಿಳಿವುದಕೆ ರಘುನಾಥನು ॥ ೧ ॥

ರಾಗ ಸುರುಟಿ ಆದಿತಾಳ

ಧಾರಿಣಿಪಗೆ ನಮಿಸಿ । ಪವನಜ । ಹಾರಿದಶೋಕವನಕೆ ॥ ನಾರಿಮಣಿಯ ಕಂಡೆರಗುತ ಹರುಷದಿ । ಚಾರುಚರಣದೆಡೆಯೊಳು ಸ್ತುತಿಗೆಯ್ದನು ॥ ೧ ॥ ಜಯ ಜನಕನ ಜಾತೆ । ತ್ರಿಜಗ । ನ್ಮಯೆ ಸುಜನರ ಮಾತೆ ॥ ಭಯವರ್ಜಿತೆ ಜಂಭಾಂತಕಪೂಜಿತೆ । ದಯಸಾಗರೆ ಲಾಲಿಸು ಬಿನ್ನಪವನು ॥ ೨ ॥ ಖ್ಯಾತೆ

ನಿನ್ನಂತಬಲೆ । ರಚಿಸಿಂದಾ್ರ । ರಾತಿ ಕಡಿದನು ರಣದಿ ॥ ಪ್ರೀತಿಯಿಂದ ಹೇರಾಳ ದುಃಖಿ ರಘು । ನಾಥನು ಕಳುಹಿದ ನಿನ್ನೆಡೆಗೆನ್ನನು ॥ ೩ ॥

ರಾಗ ಧನ್ಯಾಸಿ ಅಷ್ಟತಾಳ

ಚಂದವಾಯಿತ್ತು ಹನುಮ ನೀ । ಬಂದ ಕಾರಣದೊಳಿನ್ನ । ಕಂದ ಬಾಬಾರೆನುತಲರ । ವಿಂದಮುಖಿ ತಾನಪ್ಪಿದಳು ॥ ೧ ॥ ದೂಷಣಾರಿಯಂತೆ ಶಿರವ । ನಾಸುರೇಂದ್ರು ಕಾಣಿಸಲ್ಕೆ । ಕ್ಲೇಶದಿಂದ ಸಾಯುಬಗೆಯು । ಲೀಸರವು ತಡೆದಳೆನ್ನ ॥ ೨ ॥ ಅಂತರಂಗವಿದೇ ಮಾತ । ಕಾಂತನಿಗರುಹು ಹಿಂದೆ । ಕಾಂತಾರದಿ ರಾಮನು ಜ । ಯಂತನಿಂಗುದ್ಧರಿಸಿದುದ ॥ ೩ ॥ ತಾಯೆ ಖಳರಾಯುಷ್ಯ ತೀರಿ । ಹೋಯಿತೆನುತ ಬಂದು ಹನುಮ । ಪ್ರೀಯದಿಂದಲಾಗ ರಘು । ರಾಯಗೆ ವಿಸ್ತರಿಸಿದನು ॥ ೪ ॥

ರಾಗ ತುಜಾವಂತು ಅಷ್ಟತಾಳ

ವಸಗೆಂಬ ವಾರ್ತೆ ಕೇಳಿದರೆಲ್ಲ । ಸೀತೆ । ಯಶೋಕಾವನದಿ ರಾಮನಾಮವ ಸ್ಮರಿಸಿರ್ಪ ॥ ಪ ॥ ಅಮ್ಮಮ್ಮ ವಿಭೀಷಣಗೆಣೆಯಿಲ್ಲ । ಜಗ । ದಮ್ಮತಾ ಪುಸಿಯೆಂದು ಪೇಳಿದ ಸೊಲ್ಲ ॥ ಬ್ರಹ್ಮಪುತ್ರನು ಮೂಲಾದಿಯ ಬಲ್ಲ । ಪರ । ಬ್ರಹ್ಮ ತಾನಲ್ಲದೆ ಹನುಮಂತ ಕಪಿಯಲ್ಲ ॥ ೧ ॥ ಹೀಗೆಂದು ಕಪಿಗಳು ನಲಿದಾಡಿ । ನಳ । ಭೋಗಿ ಸುಗ್ರಿವಾದಿಗಳನೊಡಗೂಡಿ ॥ ರಾಘವನೊಳಗಪ್ಪಣೆಯ ಬೇಡಿ । ಕಟ್ಟಿ । ಬೇಗದಿಂದೆಳೆದು ತರುವೆವಿಂದ್ರಾರಿಯ ನೋಡಿ ॥ ೨ ॥

ವಾರ್ಧಿಕ

ಇತ್ತ ಕಪಿಗಳು ಪಾರುಪತ್ಯಮಂ ಮಾಡುತಿರೆ । ಚಿತ್ತದಲಿ ಪುರುಹೂತಜಿತು ಚಿಂತಿಸುತಲಯ್ಯ । ಗಿತ್ತ ಭಾಷೆಗೆ ಮಾರಣಾಧ್ವರವ ನಿಶ್ಚಯಿಸಿ ಕುಂಭಿನಿಯೊಳಯ್ತಂದನು ॥ ಸುತ್ತೇಳುಕೋಟಿ ರಕ್ಕಸರ ನಿಲಿಸುತ್ತಲದ । ರೊತ್ತಿನಲಿ ಭೂತಭೇತಾಳರಂ ಪರುಠವಿಸಿ । ಬಿತ್ತರದ ಯಜ್ಞಶಾಲೆಯ ರಚಿಸಿ ಕುಲದೇವಿಯರ್ಚಿಸುತ ಪೊಡಮಟ್ಟನು ॥ ೧ ॥

ರಾಗ ಧವಳಾರ ತ್ರಿವುಡೆತಾಳ

ಶಂಕರಿ ಸರ್ವೇಶ್ವರಿ ದುರಿತಭ । ಯಂಕರಿ ನಮ್ಮಾನ್ವಯಪೋಷಿಣಿ । ಕಿಂಕಜರನಮಾತೇ ಗಿರಿಜಾತೆ ॥ ಗಿರಿಜಾತೆಯೆ ನಮ್ಮರಸಗೆ ಕರುಣಿಸು । ಲಂಕಾಧಿಪತ್ಯ ಸ್ಥಿರವಾಗಿ ॥ ಶೋಭಾನೆ ॥ ೧ ॥ ಶತ್ರುಗಳನು ಜಯಿಸುವ

ಶಕ್ತಿಯು । ಮಿತ್ರರನೂ ಸಲಹುವ ಶಕ್ತಿಯು । ಧಾತ್ರಿಯಿರುವನಕಾ ನಡೆಸೆಂದು ॥ ನಡೆಸೆಂದತಿ ಭಕ್ತಿಯೊಳರ್ಚಿಸಿದರೆ । ಕಾತ್ಯಾಯನಿ ಮೊಗವ ತಿರುಹಿದಳು ॥ ಶೋಭಾನೆ ॥ ೨ ॥

ರಾಗ ಸಾಂಗತ್ಯ ರೂಪಕತಾಳ

ಸೋಲವಾಯಿತುಯೆಂದು ಸುರಪಾಲಜಿತು ಬಂದು । ಮೂಲಕುಂಭಿನಿ ಭೂಮಿಗಿಳಿದು ॥ ಕಾಲನಂದದಿ ಪುರೋಹಿತ ಪೇಳ್ದ ಮತದಿಂದ । ಶಾಲೆ ಹಿಡಿದು ದೀಕ್ಷೆಗೊಂಡ ॥ ೧ ॥ ಕಾಮಾರಿಕಮಲಜರಿಂದ ನೇಮವ ಕೊಂಡು । ಹೋಮ ಕಯ್ಗೊಂಡ ಶಕ್ರಾರಿ ॥ ಆ ಮಹಾ ಕುರಿ ಕೋಣ ಮಾಂಸ ದುರ್ಗಂಧವು । ರಾಮನ ಬಲಕೆ ಕಾಣಿಸಿತು ॥ ೨ ॥ ಧಗಧಗಿಸುವ ದಳ್ಳುರಿಯ ಕಂಡು ಶರಣಂಗೆ । ರಘುನಾಥನೊಲಿದು ಕೇಳಿದನು ॥ ಸುಗುಣಸಾಗರನೆ ಪೇಳಿಂತಹ ಪರಿ ಯಾರಿಂ । ದೊಗೆದುದೆಂದೆನಲರುಹಿದನು ॥ ೩ ॥

ರಾಗ ಕಾಂಭೋಜಿ ಅಷ್ಟತಾಳ

ರಾಘವದೇವ ಕೇಳಯ್ಯ । ನಿಗ । ಮಾಗಮವೇದ್ಯಾಹಿಶಯ್ಯ ॥ ನಾಗಿತನ್ನೊಡನಿಂತ । ಮೇಗರತನವೇತ । ಕಾಗಲಿ ತೋರ್ಪ ಭ । ಯಾಗವಾವರುಹುವೆ ॥ ೧ ॥ ಮಾರಣಾಧ್ವರ ಮಾಳ್ಪ ನಿನಗೆ । ಸುರ । ಪಾರಿ ಕುಂಭಿನಿಯೊಳಗವಗೆ ॥ ಮೂರು ಲೋಕದೊಳಿದಿ । ರಾರುಂಟು ಬೊಮ್ಮನ । ಕಾರುಣ್ಯದಲಿ ಬಂದ । ಸಾರ ಸಾಮರ್ಥ್ಯದಿ ॥ ೨ ॥ ನಿನ್ನ ಸೇನೆಯೊಳಗುತ್ತುಂಗ । ರುಂಟೆ । ಯನ್ನಾಹಾರದಿ ಸತಿಸಂಗ ॥ ಹನ್ನೆರಡಬ್ದ ವಿ । ಭಿನ್ನ ಸದ್ವ್ರತರಿರ । ಲಿನ್ನವರೊಳು ಖಳ । ನಿರ್ನಾಮನಾಗುವ ॥ ೩ ॥

ಕಂದ

ಮಿಕ್ಕವರಿಂಗಸದಳ ಬಲು । ರಕ್ಕಸನಂ ಮುರಿದುರುತರ ಕೀರ್ತಿಯ ಪಡೆಯಲ್ ॥ ತಕ್ಕವರಿಲ್ಲೆನೆ ಲಕ್ಷ್ಮಣ । ನಕ್ಕು ನೃಪಾಲನೊಳೆಂದನು ಶೌರ್ಯವು ಜಡಿಯಲ್ ॥ ೧ ॥

ರಾಗ ಮಾರವಿ ಏಕತಾಳ

ಯಾಕೀ ಪರಿ ಕಡು । ವ್ಯಾಕುಲ ತಾಳ್ವಿರಿ । ಯೀ ಖೂಳನ ವಧೆಗೆ ॥ ಕಾಕುತ್ಸ್ಥಾಧಿಪ । ತಾ ಕರ್ಪುರವೀ । ಳ್ಯಾಕುಲವನು ತನಗೆ ॥ ೧ ॥ ಕೊಂದು ಕೊಡುವೆ ದಶ । ಕಂಧರನಣುಗನ । ಸಂದೇಹಗಳೇನು ॥ ಮಂದರಾದ್ರಿಧರ । ನೊಂದು ಕರುಣವಿರ । ಲಿಂದಂಜೆನು ನಾನು ॥ ೨ ॥ ಎಲ್ಲವರಿಂದಲಿ । ಸಲ್ಲದ

ಕಾರ್ಯವ । ನೊಳ್ಳಿತೆನಲು ಮಾಡಿ ॥ ಉಲ್ಲಾಸದೊಳು ಪ್ರ । ಫುಲ್ಲ ಯಶಸ್ಸಿದ । ರಲ್ಲಿ ಪಡೆವೆ ನೋಡಿ ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಊರ್ಮಿಳಾಪತಿಯೆಂದ ನುಡಿ ಕೇ । ಳ್ದು ಮ್ಮಳಿಸುವಾನಂದರಸದೊಳ । ಗೊಮ್ಮೆ ತಳ್ಕಿಸುತೆಂದ ರಾಘವ । ತಮ್ಮನೊಡನೆ ॥ ೧ ॥ ಒಂದುಳಿಯದೀ ಸಾಧನಗಳಿ । ದ್ದಿಂದು ಶಕ್ರಾರಿಯನು ಕೊಂದಡೆ । ತಂದವನು ನೀನಾದೆ ಜನಕನ। ನಂದನೆಯನು ॥ ೨ ॥ ಹನುಮ ನೀಲಾಂಗದ ವಿಭೀಷಣ । ವನಜಭವ ಸುತ ಸಹಿತಲಯ್ವರ । ರಣಕೆ ಬೆಂಬಲವಾಗಿ ಕರಕೊಂ । ಡನುಜ ಪೋಗೈ ॥ ೩ ॥

ಭಾಮಿನಿ

ಕೆಡಿಸಿ ಖಳರಧ್ವರವ ಮಂತ್ರವ । ಸುಡಿಸಿ ಸೋಪಸ್ಕಾರ ಸಾರವ । ಬಿಡಿಸಿರೈ ದಾನವರ ವರ ಸಂಸಾರವಿಭ್ರಮವ ॥ ನಡಿರೆನಲು ರಾಘವನ ಬೀಳ್ಗೊಂ । ಡೊಡನೆ ಕುಂಭಿನಿಗಿಳಿದು ಕಲ್ಪದ । ಕಡೆಯ ಭೈರವರಂತೆ ಮುತ್ತಿದರಾ ಮಹಾಧ್ವರವ ॥ ೧ ॥

ವಾರ್ಧಿಕ

ಸುಳಿಸಿದರ್ ಭೂತಭೇತಾಳರಂ ದೆಸೆದೆಸೆಯೊ । ಳಿಳಿಸಿದರ್ ಪ್ರಾಕಾರದಸುರರಂ ಜಡಿವುತ । ಪ್ಪಳಿಸಿದರ್ ಡೊಳ್ಳಾದ ಋತ್ವಿಕ್ಕುಗಳ ಹೊಗೆವ ಹೋಮದೊಳ್ ಹೋಮಿಸಿದರು ॥ ಬಳಸಿದರ್ ಯಜ್ಞಸಾಹಿತ್ಯಮಂ ತಮ್ಮೊಳೊ । ಕ್ಕಳಿಸಿದರ್ ಮಾರಣಾಧ್ವರವ ಹನುಮ ಪ್ರಮುಖ । ರುಳಿಸಿದರ್ ಶಕ್ರಾರಿಯೊಬ್ಬನಂ ಬಳಿಕ ಲಕ್ಷ್ಮಣನಾತಗಿಂತೆಂದನು ॥ ೧ ॥

ರಾಗ ಭೈರವಿ ಏಕತಾಳ

ಫಡ ರಾವಣಿ ಸಾಕೇಳು । ಬಿಲ್ । ಹಿಡಿದೇರ್ನಿಲು ತೇರಿನೊಳು ॥ ಕಡೆಗಾಲಕೆ ಮುಖವೇಕೆ । ಇ । ನ್ನಡಗಿರ್ದರೆ ಬಲು ಠೀಕೆ ॥ ೧ ॥ ಪೊಡವಿಯ ಪೊಕ್ಕಡಗಿದರಾ । ಬೆಂ । ಬಿಡುವುದೆ ಪರನಾರಿಯರ ॥ ಕೆಡಿಸಿದ ಕಡು ಪಾತಕವು । ಕುಲ । ಕದರದಿಹುದೆ ಘಾತಕವು ॥ ೨ ॥ ಇನ್ನಾದರು ಛಲ ಬಿಟ್ಟು । ಶ್ರೀ । ಕನ್ಯಾಮಣಿಯನು ಕೊಟ್ಟು ॥ ಚೆನ್ನಾಗಿಯೆ ಮರೆವಿಡಿಯಾ । ಶ್ರೀ । ಮನ್ನಾರಾಯಣನಡಿಯ ॥ ೩ ॥

ಕಂದ

ಇಕ್ಷ್ವಾಕುಕುಲೋದ್ಭವನೆಂ । ಬಾಕ್ಷೇಪದ ಮೂದಲೆಯಂ ಕೇಳ್ದಮರಾರೀ ॥

ದೀಕ್ಷೆಯು ಬಿಸುಟಿದ್ದು ವಿಲೋಃ । ದಾಕ್ಷಿಣ್ಯದೊಳಿಂದನು ಕಿರಿಯನ್ಯಗೆ ಪತಿ ಯೋರಿ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎಲವೊ ಸುಡು ಸುಡು ನಿನ್ನ ಪೋರೆಯು । ಕುಲಸುಗಂಧದ್ರುಮಕಂಠಾ ರಕ । ನಿಲದಿರೆನ್ನದಿರಿಸೊಳು ಭಂಡರ । ತಿಲಕ ಪೊಲಗು ॥ ೧ ॥ ಪಿಂಡವನ ಧಿಕ್ಕರಿಸಿ ಲಕ್ಷ್ಮಣ । ಗೆಂದನಿಲಿ ಕೋದಂಡವನು ಓಡಿ । ಬಂದನಿದಿ ರಿಪುವಂಶ ಪರಶು ಪ್ರ । ಚಂಡರಾರಿ ॥ ೨ ॥ ಪರಾಂಗನಾಸಿಗಳುಳ್ಳಡಜ್ಞನ । ಕರೆಸು ಪೀಳಿಯಂ ವಿತ್ತ್ಯ ದೇಶಾಂ । ತರಕೆ ತಿರಿದುಂಬುವಕೆ ಶರಣನ । ಭರದಿ ಕಳುಹು ॥ ೩ ॥ ಅಜ್ಞನನು ಕರೆಸುವೆ ದಶಾಸ್ಯನ । ಮಜ್ಜಗುಣಿಸು ಶಶಾಂಕರಿರುತಿರು । ಪನ್ನಗರ ಶರಣಂಗೆ ಲಂಕೆಯು । ಮಣ್ಣುಕೊಡಲು ॥ ೪ ॥

ಭಾಮಿನಿ

ಮಗಧರಾಯನ ಪೊಮ್ಮನಾಡಿ । ದಗಡುವಾಕ್ಯವ ಕೇಳ್ದು ಸುರಪನ । ಬಿಗಿದ ಖಳನುಬ್ಬೇರಿ ಗರ್ಜಿಸುತೆಂದ ಖಾಹಿಯಲಿ ॥ ರಘುಕುಲದೊಳತಿ ಧೀರ ನೆಂಬೀ । ಹಗರಣವು ನಿನಗಿರಲು ಕೊಳ್ಳಿಂ । ದುಗಿಸಿದನು ಮುಂಗಾರು ಮೇಘದ ಸೋನೆಯೆನೆ ಸರಳ ॥ ೧ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ರಾವಣಾತ್ಮಜ ಭಾರಿ ಬಲನಯ್ಯ । ನೀ ಬಿ । ಟ್ಟೀ ವಿಶಿಖದೊಳೇನು ಫಲ ವಯ್ಯ ॥ ಜೀವಗಳ್ಳರ ಗಂಡ ನೋಡೆಂದು । ಬಲು । ಠೀವಿಯೊಳದ ಖಂಡಿಸಿದ ನಂದು ॥ ೧ ॥ ಅಲ್ಪ ಪೌರುಷನೆಂದು ಬಗೆದೆಯಾ । ಮತಿ । ತಪ್ಪಿ ದರ್ಪಣೆ ಯನ್ನ ತೆಗೆದೆಯಾ ॥ ಮುಪ್ಪುರಾಂತಕನಿತ್ತ ಶಕ್ತಿಯು । ತೆಗೆ । ದಪ್ಪಳಿಸುವೆ ತೋರು ಯುಕ್ತಿಯು ॥ ೨ ॥ ಪರಶರವಾದಡೇನಮ್ಮರ । ಸತಿ । ಯರ ತಂದವ ರೊಳಿರಲಾ ಶರ ॥ ಬರಿ ಹುಲುಕಡ್ಡಿ ಸಮಾನವಾ । ಗಿಹು । ದರಿತುಕೊಳ್ಳೆನು ತೆಳ್ಳ ಬಾಣವ ॥ ೩ ॥

ಭಾಮಿನಿ

ಮಾಯಮಾದುದು ನೋಡೆಲಾ ನಾ । ರಾಯಣಾಸ್ತ್ರದೊಳೊಕ್ಕ ಪರ ದೈ । ತೇಯನೆಚ್ಚ ಭವಾಸ್ತ್ರವದರುಗ್ರದ ಪ್ರತಾಪದೊಳು ॥ ಬೀಯಪೌರುಷನಾಗಿ ಖಳ ಮರು । ಛಾಯುಗತನಾಗುತ್ತ ಶುಕ್ರನ । ಪ್ರೀಯ ಮಂತ್ರದೊಳಿದ್ದು ಪುನರಪಿ ಸಮರಕನುವಾದ ॥ ೧ ॥

ರಾಗ ಶಂಕರಾಭರಣ ಮಟ್ಟೆತಾಳ

ಮಲ್ಲ ದೈತ್ಯರೆಮ್ಮ ರಣದಿ । ಗೆಲ್ವುಪಾಯವು ॥ ಹುಲ್ಲು ಮನುಜರರಿತ ರೆಂಬು । ದೊಳ್ಳೆ ಚೋದ್ಯವು ॥ ಮೆಲ್ಲನೆಮ್ಮ ಕಿರಿಯ ತಾತ । ನೆಲ್ಲ ಕಲಿಸಿದ ॥ ನಲ್ಲದಿರೆ ಮನುಷ್ಯನೀತ । ನೆಲ್ಲಿ ಪಠಿಸಿದ ॥ ೧ ॥ ಇನ್ನಿದಕ್ಕೆ ತಕ್ಕುಪಾಯ । ವನ್ನು ನೋಡದೆ । ಖಿನ್ನನಾದಡುಳಿವ ಕಾಣೆ । ಭಿನ್ನ ಮಾಡದೆ ॥ ಸಣ್ಣ ಪಿತನ ಕ್ಷೇಮವೊದಗ । ದೆನ್ನುತಾ ಕ್ಷಣ । ಮುನ್ನ ಬೊಮ್ಮನಿತ್ತ ಶಕ್ತಿ । ಯನ್ನುಗಿದ ಘನ ॥ ೨ ॥ ಕುಲಕುಠಾರ ಕರೆಸಿಕೊಳ್ಳು । ತಲೆಯ ಕಾವನ ॥ ನೆಲನ ಋಣವು ತೀರಿತಿದಕೊ । ಜಲಜಕುವರನ ॥ ಜ್ವಲಿತ ಶಕ್ತಿಯನ್ನು ಬಿಟ್ಟು । ಕೊಲುವೆ ನಿನ್ನನು ॥ ಉಳಿಯಗೊಡೆನು ಬೊಪ್ಪನೆಂಬ । ತಿಳಿವ ಮರೆತೆನು ॥ ೩ ॥

ವಾರ್ಧಿಕ

ಎಂದು ದಿವ್ಯಾಸ್ತ್ರದಿಂದಿಡಲಾ ವಿಭೀಷಣಂ । ಸಿಂಧೂರವರದನಂ ಧ್ಯಾನಿಸು ತ್ತಿರಲು ಕಪಿ । ಸಂದೋಹ ಕಳವಳಿಸಲಾ ಶಕ್ತಿ ಶರಣನ ಸಮೀಪಕಾರ್ಭಟಿಸಿ ಬರಲು ॥ ಅಂದಾಂಜನೇಯನಡಹಾಯ್ದು ಮಹಾಸ್ತ್ರಮಂ । ಸಂದಾಗೆ ಮುರಿದು ಸಾಗರಕೆ ಬಿಸುಡಲ್ ಕಂಡು । ನೊಂದಾ ಖಳಂ ಬಳಿಕ ಭೂದೇವಿ ದತ್ತಶಕ್ತಿಯ ತೆಗೆವುತಿಂತೆಂದನು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ನಳಿನಾಕ್ಷ ಕರುಣದಿ । ಸಲಹಿದಡವಗಾರು । ಮುಳಿದೇನ ಮಾಡುವರು ॥ ಉಳಿದನಿಂದಿಗೆ ನಮ್ಮ । ಕುಲಗೇಡಿಯನು ಹಿಂದೆ । ತೊಲಗಿಸಿ ದೂಡಿದರು ॥ ೧ ॥ ಆದಿನಾರಾಯಣ । ನಾದ ಕಾರಣ ರಾಮ । ನೀ ದುಷ್ಟ ವಾನರರು ॥ ಕಾದಿ ಗೆಲ್ಲಲ್ಲವರಲ್ಲ । ದಾದರೆ ಬಲುಹೇನು । ಚೋದಿಗ ಕಪಿವರರು ॥ ೨ ॥ ಸುಡಲೆಂದು ಕೋಪದೊ । ಳಡಿಗಡಿಗುರಿದೇಳು । ತೊಡನೆ ಸೌಮಿತ್ರಿಯೊಳು॥ ಎಡಗಯ್ಯ ಶಕ್ತಿಯ । ಮಿಡುಕಿಸುತೆಂದನು । ಗ್ಗಡದ ಗಾಂಭೀರ್ಯದೊಳು ॥

ರಾಗ ಭೈರವಿ ಅಷ್ಟತಾಳ

ತರಳ ಕೇಳಾಹಾರವು । ನಿದ್ರೆಯು ಸತಿ । ಯರೊಳು ಸಂಭೋಗವಿವು ॥ ಸರಿಯಾಗಿ ಬಿಡದೆ ಹನ್ನೆರಡಬ್ದ ತ್ಯಜಿಸಿದ । ನಿರುಗೆಯಿದ್ದರೆ ನಿಲ್ಲೆಲಾ ॥ ೧ ॥ ಮಾತಿನೊಳೇನಹುದು । ನಿನ್ನಯ ಬಾಣ । ಜಾತವ ಕಳುಹುವುದು ॥ ಧಾತು ಗೆಟ್ಟರೆ ನಿನ್ನ । ತಾತನ ಕರೆಸಿಕೊ । ಳ್ಳೀತಕಿದೆನುತೆಚ್ಚನು ॥ ೨ ॥ ಚಿಕ್ಕವಗಾ

ವ್ರತವು । ಸಾಧಿಸುವರೆ । ತಕ್ಕುದಲ್ಲವು ಮಾರ್ಗವು ॥ ಮಿಂಕ್ಕುಳಿದರಿಗದಂ। ದಕ್ಕದೆನುತ ನಿನ್ನೊ । ಳಕ್ಕರೆ ತಾಳಿದೆನು ॥ ೩ ॥ ಎಲವೊ ಶಕ್ರಾರಿ ಕೇಳು । ದಿವ್ಯಾಸ್ತ್ರವ । ಕಳುಹಿಸು ಬೇಗದೊಳು ॥ ಬಲು ವ್ರತವಿರಲಿಲ್ಲ । ದುಳಿಯುಲಿ ಮಮತೆಯಂ । ಛಲ ಬೇಡ ನಿನಗೆಂದನು ॥ ೪ ॥ ಆದರೆ ಕೊಳ್ಳೆನುತ । ತೊಟ್ಟನಂ ಮಹಾ । ಭೂದೇವಿಶರವನಾತ ॥ ಹಾದು ಬರಲು ಕಂಡು । ಭೇದಿಸಿ ಕೆಡಹಿದ । ಮೇದಿನಿಯೊಳಗದನು ॥ ೫ ॥ ಬಳಿಕ ರಾಘವನಂಘ್ರಿಯು । ಧ್ಯಾನಿಸುತೆಚ್ಚ । ಘಳಿಲನೆ ರಾವಣೆಯು ॥ ನಳಿನಭವಾಸ್ತ್ರದಿ । ತಲೆಯಂನ ಕಡಿದು ಬಾಂ । ದಳದೊಳು ಕಾಣಿಸಿತು ॥ ೬ ॥

ಕಂದ

ಅಮರರು ಮಂದಾರದ ಬಿರಿ । ಸುಮವರ್ಷವನತಿ ಹರುಷದಿ ಸೂಸಲ್ ಬೇಗಂ ॥ ಗಮಿಸಿದ ರಾಘವನಂಘ್ರಿಗೆ । ನಮಿಸುತ ರಣವೃತ್ತಾಂತವನರುಹಿದರಾಗಂ ॥ ೧ ॥

ಭಾಮಿನಿ

ಮೂರುಲೋಕದ ಮೃತ್ಯು ಯಮನಲಿ। ಸೇರಿದನು ಖಳನೆಂದು ರಘುಪತಿ। ಭೂರಿ ಹರುಷದಿ ಲಕ್ಷ್ಮಣನ ತಕ್ಕವಿಸಿ ಕರುಣದಲಿ ॥ ಚಾರುತರ ವಿನಯೋಕ್ತಿಯಿಂದುಪ । ಚಾರ ಮನ್ನಣೆಗಳಲಿ ನಿಜಪರಿ । ವಾರವನು ಸಂತಯಿಸಿ ಬಳಲಿದ ಸಹಜನನು ಕರೆದು ॥ ೧ ॥

ರಾಗ ಭೈರವಿ ಝಂಪೆತಾಳ

ಕಿತ್ತು ಗಾಯದ ಕಣೆಯು । ವ್ಮೈಯು ರಕ್ತವ ತೊಳೆದು । ಯಿತ್ತಕವಳೌಷಧಿಯು । ಮಂತ್ರಿಸುತ ರಾಮ ॥ ೧ ॥ ನಿತ್ತುಕೊಂಡಿರಬೇಡಿ । ಹನುಮ ನೀಲಾಂಗದರೆ । ನುತ್ತಲುಪಚರಿಸಿದನು । ಮರ್ಕಟಾಧಿಪರ ॥ ೨ ॥ ಸಾಧ್ಯವಾಯಿತು ನಮಗೆ । ಸೇರಿದಳು ಜಯಲಕ್ಷ್ಮಿ । ಗೆದ್ದ ಭರತನ ತಮ್ಮ । ನಿದ್ದ ಕಡೆಯಿಂದ ॥ ೩ ॥ ಬದ್ಧವಾಯಿತು ಲಂಕೆ । ಬಳಲಿರುವ ಶರಣಂಗೆ । ಬಿದ್ದ ರಾವಣ ರಣದೊ । ಳೆಂದು ನಿಶ್ಚಯಿಸಿ ॥ ೪ ॥ ಕಂದ ಕೇಳೀ ಶರಣ । ನೆಂದ ಸಾಧನವು ಮೂ । ರೆಂದು ದೊರಕಿತು ನಿನಗೆ । ಹನ್ನೆರಡು ವರುಷ ॥ ೫ ॥ ಇಂದುಪರಿಯಂತ ಫಲ । ತಂದೀವೆ ದೇವರಿಗೆ । ತಿಂದವನು ನಾನಲ್ಲ । ಜಠರಾಗ್ನಿಗಾಗಿ ॥ ೬ ॥ ದೇಶಾಂತರವ ತಿರುಗಿ । ಕಾನನಾಂತರದೊಳಗೆ । ಗಾಸಿಯಾದುದು ನಿದ್ರೆ । ಯೆಂತು ನಿನಗೆಂದ ॥ ೭ ॥ ಹಾಸಿ ಮಲಗುವ್ವದುಂಟೆ ।

ಶಸ್ತ್ರಾಸ್ತ್ರವನು ಪಿಡಿದು । ದಾಸತ್ವ ಸಲಹಿದೆನು । ದೋಷಕರ ಭಯದಿ ॥ ೮ ॥ ತರುಣಿಯರ ಭೋಗವನು । ತೊರೆದು ನೀನೀ ತನಕ । ವಿರುತಿದ್ದ ಕಾರಣವ । ನರುಹೆನಗೆ ತಮ್ಮ ॥ ೯ ॥ ಊರ್ಮಿಳಾಂಗನೆ ಮದುವೆ । ಯಾದಾರಭ್ಯದಿ ತಾಯು । ಮರ್ಮದಲಿ ಚರಿಸಿದೆನು । ವನವಾಸದೆಡೆಯು ॥ ೧೦ ॥ ಅರಿಯದಾದೆನು ಹಸಿವಿ । ಗಾಹಾರವನು ಕೊಳದೆ । ತರುವೆ ಹಂಪಲವನೆ । ನ್ನಾಜ್ಞೆ ಹೊರತೆಂದು ॥ ೧೧ ॥ ಕರುಣಹೀನನ ಸೇರಿ । ಕಷ್ಟವೊದಗಿತು ನಿನಗೆ । ತರಳ ನಿನ್ನುಪಕಾರ । ಮರೆಯಲಿನ್ನುಂಟೆ ॥ ೧೨ ॥ ಕರ್ಮವಶದಿಂದಲೀ । ವ್ರತ ಸಾಧ್ಯವಲ್ಲದಿರೆ । ವ್ಯೋಮಕೇಶನ ಭಕ್ತ । ಸೋಲುವನೆ ರಣದಿ ॥ ೧೩ ॥ ಅನುಜನಾಡಿದ ನುಡಿಗೆ । ಮೆಚ್ಚಿ ರಾಘವ ತಾನು । ಅನಿಮಿಷರು ಪೊಗಳಲ್ಕೆ ಪೊಕ್ಕ ಬೀಡಿಗೆಯು ॥ ೧೪ ॥

ಭಾಮಿನಿ

ಇಳುಹಿದನು ದಶಕಂಠನೋಲಗ । ದೊಳಗೆ ಸಾರಥಿ ಶಕ್ರಜಿತುವಿನ । ತಲೆಯು ಮೊಸಗೆಯು ಹರೆಯು ಹೊಯ್ ಸೀಳಿಂದಿನಾಹವವ ॥ ಗೆಲುವಿದೆಂಬೀ ಕೂರಿತಹ ನುಡಿ । ಯಲಗು ನಾಂಟಿತು ಬೆನ್ನಿನಲಿ ಕಳ । ವಳಿಸಿ ಹಾ ಯುವ ರಾಜ ಹಾಯೆನುತೊರಗಿದನು ನೆಲಕೆ ॥ ೧ ॥

ರಾಗ ನೀಲಾಂಬರಿ ಆದಿತಾಳ

ಕಂದಾ ನೀ ನಮ್ಮನ್ವಯಾಬ್ಧಿ । ಚಂದ್ರನೆತ್ತ ಪೋದೆ ॥ ಇಂದ್ರಾರಿಯೆಂದೆಂಬ ಪೆಸರ । ನಿಂದಿನೊಳಡಗಿಸಿತೆ ॥ ೧ ॥ ಮಗನೆ ನಿನ್ನ ಗೆಲುವ ವೀರ । ಜಗದೊಳಿಲ್ಲವೈಸೆ ॥ ಮೃಗಧರನಿತ್ತಾಯುಷ್ಯವು । ನಗೆಗೀಡಾದುದಯ್ಯೊ ॥ ೨ ॥ ಈರೇಳು ಲೋಕವೆನ್ನ ಕೈ । ಸೇರಿತು ನಿನ್ನಿಂದ ॥ ಯಾರುಂಟು ನಿನ್ನಂತಾ ಸುತ । ಮೂರರು ಧಾತ್ರಿಯಲಿ ॥ ೩ ॥

ದ್ವಿಪದಿ

ಕಾಂತೆ ಬಂದಳು ಕೇಳಿ ದಶಶಿರನ ಪೊರೆಗೆ । ಸಾಂತ್ವದಲಿ ಕಡು ನೊಂದು ಸೊಸೆಯರತಿ ಮರುಗೆ ॥ ೧ ॥ ಮಗನ ಶಿರ ಮಂಡೋದರಿಯು ತೊಡೆಯೊಳಿಟ್ಟು । ಮೊಗವ ನೋಡುತ್ತ ಮೋಹದಿ ಮುತ್ತ ಕೊಟ್ಟು ॥ ೨ ॥ ಮೃತ್ಯುವಾದಳು ಮಗನೆ ಕುಲಕೆ ನಿನ್ನತ್ತೆ । ಕರ್ತುವಿಲ್ಲದ ರಾಜ್ಯ ಪರರಾಳುವಂತೆ ॥ ॥ ೩ ॥ ಬಗೆಬಗೆಯು ಶೋಕದಲಿ ಮುಳುಗಿ ಬಸವಳಿದು । ಮಗುಳೆ ಕಾಂತನ ಪಚಾರಿಸುತ ಕಡು ಮುಳಿದು ॥ ೪ ॥ ಹೆತ್ತೊಡಲು ಹಾಳಾದುದರಸ ನಿನ್ನಿಂದೆ ।

Scanned by CamScanner

ಪುತ್ರ ಶೋಕಾಗ್ನಿಗೆ ವಿವೇಕ ಪೇಳ್ ಮುಂದೆ ॥ ೫ ॥ ಎಂದು ನಾನಾ ತೆರದೊ ಳಳುವುದನು ಕಂಡು । ನಂದಿವಾಹನನಂತೆ ದನುಜ ಖತಿಗೊಂಡು ॥ ೬ ॥

ಭಾಮಿನಿ

ಸುರಪಜಿತುವಿನ ಮರಣ ಮುಂಡೋ । ದರಿಯು ದೈನ್ಯುಪಚರಣೆಗಾ ಖಳ । ಧರಣಿಜೆಯು ಕೊಲಲೆಂದು ಖಡ್ಗವ ಕೊಂಡು ಪೊರಮಂಟ ॥ ಸುರರು ಬಾಯಲ್ ಬಿಡಲಾ ಪ್ರಧಾನರು । ಕರದ ಕತ್ತಿಯುನಿಳುಹಿ ನಾನಾ । ಪರಿ ವಿವೇಕದೊ ಳೊಡಬಡಿಸಿ ಮರಳಿಚಿದರರವುನೆಗೆ ॥ ೧ ॥

ವಾರ್ಧಿಕ

ತರಳರಿರ ಕೇಳಿರಳಿದುಳಿದ ಬಲಸಹಿತ ದಶ । ಶಿರ ಬಂದು ಶ್ರೀರಾಮಗಿದಿ ರಾಗಲವನ ಸಂ । ಹರಿಸಿ ಲಂಕಾಧಿಪತ್ಯವ ವಿಭೀಷಣಗಿತ್ತು ಜಾನಕಿಯುನಗ್ನಿ ಮುಖದಿ ॥ ಪರಿಶೋಧಿಸುತ ವರಿಸಿ ಪುಷ್ಪಕವಿಮಾನದೊಳ್ । ತೆರಳಿ ನಂದಿ ಗ್ರಾಮದೊಳು ಭರತನಂ ಕಂಡು । ಧರೆಯಾಧಿಕಾರಮಂ ಕಯ್ಗೊಂಡು ಪ್ರಜೆ ಗಳಂ ಪರಿಪಾಲಿಸುತ್ತಿರ್ದನಂ ॥ ೧ ॥

ಮಂಗಲ

ರಾಗ ಮಧ್ಯಮಾವತಿ ಆದಿತಾಳ

ಮಂಗಳಂ । ಜಯ । ಮಂಗಳಂ ॥ ಪ ॥ ಅಖಿಳಬ್ರಹ್ಮಾಂಡಸನಾಥನಿಗೆ । ಸಕಲಚರಾಚರಭರಿತನಿಗೆ ॥ ಸುಖಮಯಮೂರುತಿ ಚಿನ್ಮಯಗೆ ॥ ಮುಕುತಿ ದಾಯಕನಿಗೆ ಶಾಶ್ವತಗೆ ॥ ಮಂಗಳಂ ॥ ೧ ॥ ಪರತರಪಾವನರೂಪನಿಗೆ । ಕರು ಣಾಂಬುಧಿ ವರಚಿದ್ಘನಗೆ ॥ ಸುರನರಮನುಮುನಿಪೂಜಿತಗೆ । ಪರಿಪೂರ್ಣ ಸದಾನಂದನಿಗೆ ॥ ಮಂಗಳಂ ॥ ೨ ॥ ಕಡಲೊಳು ಶಯನವ ಗೆಯ್ದವಗೆ । ಮಡ ದಿಯ ವಕ್ಷದೊಳಿರಿಸಿದಗೆ ॥ ದೃಢಭಕ್ತರ ಹೃದ್ವಾಸನಿಗೆ । ಒಡೆಯ ಕಾಂತೇಶನ ಮಿತ್ರನಿಗೆ ॥ ಮಂಗಳಂ । ಜಯ । ಮಂಗಳಂ ॥ ಶುಭ ಮಂಗಳಂ । ನಿತ್ಯ ಮಂಗಳಂ ॥ ೩ ॥

ಯಕ್ಷಗಾನ ಇಂದ್ರಜಿತುಕಾಳಗ ಮುಗಿದುದು

ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು.

S. ೩೧೪/O. 1078/R. 1174 1000-11-1973

ಪಾತ್ರಗಳ ವಿವರ

ರಾವಣ

ಇಂದ್ರಜಿತು

ಶ್ರೀರಾಮ

ಹನುಮಂತ

ಮಾಯಾಸೀತೆ

ಜಾಂಬವಂತ

ವಿಭೀಷಣ

ಸೀತಾದೇವಿ

ಲಕ್ಷ್ಮಣ

ಮಂಡೋದರಿ

ರಾವಣನ ಮಂತ್ರಿಗಳು, ಚಾರಕರು, ರಕ್ಕಸರು, ನೀಲ, ಅಂಗದ ಮೊದಲಾದ ಕಪಿವೀರರು, ಕುಂಭಿನೀಯಾಗದ ಋತ್ವಿಕ್ಕುಗಳು, ಇಂದ್ರಜಿತುವಿನ ಸಾರಥಿ—ಮುಂತಾದವರು.

Scanned by CamScanner